24.	Proof Readers Work Senior	31		
25.	Proof Readers Work Junior	32		
26.	Machine Work Senior	33		
27.	Machine Work Junior	34		Only Nov.
28.	Compositors Work Senior	35		Exam.
29.	Compositors Work Junior	36		
30.	Book Binding Senior	37		
31.	Book Binding Junior	38		
32.	Kacheri Adalitha Senior	39	X	
33.	Kacheri Adalitha Junior	40	X	Only
34.	Insurance Practice Senior	41	X	May
35.	Insurance Practice Junior	42	X	Exam.

ಪದವಿ ಪೂರ್ವ ಶಿಕ್ಷಣಕ್ಕೆ ಪ್ರವೇಶ

2910 - ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರಿ ಹಾಗೂ ಸಂಯುಕ್ತ ಕಾಲೇಜುಗಳಲ್ಲಿ ಪದವಿ ಪೂರ್ವ ಶಿಕ್ಷಣಕ್ಕೆ ಪ್ರವೇಶವನ್ನು ಸ್ಥಗಿತಗೊಳಿಸಲು ಸರ್ಕಾರ ನಿರ್ಧರಿಸಿದೆಯೇ?*

ಆ) *ಹಾಗಿದ್ದಲ್ಲಿ, ಇದರಿಂದ ರಾಜ್ಯದಲ್ಲಿ ಒಟ್ಟು ಪದವಿ ಪೂರ್ವ ಕಾಲೇಜುಗಳಿಗೆ ಪ್ರವೇಶವನ್ನು ಸ್ಥಗಿತಗೊಳಿಸಿದಂತಾಗುತ್ತದೆಯಲ್ಲವೇ?*

ಇ) *ಇದಕ್ಕೆ ಸರ್ಕಾರವು ಪರ್ಯಾಯ ವ್ಯವಸ್ಥೆಯನ್ನು ಯೋಚಿಸಿದೆಯೇ? ಹಾಗಿದ್ದಲ್ಲಿ ಪೂರ್ಣ ವಿವರ ನೀಡುವುದು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು) :

ಅ) ಹೌದು (ತಾತ್ವಿಕವಾಗಿ)

ಆ) ಇಲ್ಲಾ. (ಸದ್ಯಕ್ಕೆ 14 ಸರ್ಕಾರಿ ಪದವಿ ಕಾಲೇಜುಗಳಿಂದ ಮಾತ್ರ ಪದವಿ ಪೂರ್ವ ತರಗತಿಗಳನ್ನು ಬೇರ್ಪಡಿಸಲಾಗಿದೆ).

ಇ) ಹೌದು. ವಿವರಗಳನ್ನು ಅನುಬಂಧದಲ್ಲಿ ಇರಿಸಿದೆ.

ಅನುಬಂಧ

ಪ್ರಶ್ನೆ ವಿಭಾಗ (೧)ಗೆ ಉತ್ತರ

ಪದವಿ ಪೂರ್ವ ತರಗತಿಗಳನ್ನು ಪದವಿ ಕಾಲೇಜುಗಳಿಂದ ಬೇರ್ಪಡಿಸುವಲ್ಲಿ ಸ್ಥೂಲವಾಗಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲಾಗುವುದು.

(1) ಈ ನಿಟ್ಟಿನಲ್ಲಿ ಮೊದಲ ಹಂತವಾಗಿ ಪದವಿ ಕಾಲೇಜುಗಳು ಇದ್ದ ಸ್ಥಳದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಸಹ ಇರವುದಾದಲ್ಲಿ ಅಂತಹ ಪದವಿ ಕಾಲೇಜುಗಳಿಂದ ಮಾತ್ರ ಪದವಿ ಪೂರ್ವ ತರಗತಿಗಳನ್ನು ಬೇರ್ಪಡಿಸಲಾಗುವುದು.

(2) ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಪೂರ್ವ ತರಗತಿಗಳನ್ನು ಮುಚ್ಚುವುದರಿಂದ, ಆಯಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಅಗತ್ಯ ಮೂಲ ಭೂತ ಸೌಕರ್ಯಗಳನ್ನು ಹೊಂದಿದ್ದು, ವಿದ್ಯಾರ್ಥಿಗಳ ಪ್ರವೇಶಾವಕಾಶಕ್ಕೆ ತೊಂದರೆ ಉಂಟಾಗದಿದ್ದಲ್ಲಿ ಮಾತ್ರ ಪದವಿ ಪೂರ್ವ ತರಗತಿಗಳನ್ನು ಬೇರ್ಪಡಿಸಲಾಗುವುದು.

(3) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅಗತ್ಯ ಪಠ್ಯ ವಿಷಯಗಳು ಲಭ್ಯವಿರುತ್ತದೆ ಎಂಬುದನ್ನು ಖಾತರಿಪಡಿಸಿಕೊಳ್ಳಲಾಗುವುದು.

ರಾಜ್ಯದಲ್ಲಿ ಕೊಳವೆ ಬಾವಿಗಳ ದುರಸ್ಥಿ

2911- ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1995-96, 1996-97 ಹಾಗೂ 97 ಜುಲೈ ತಿಂಗಳವರಗೆ ಜಿಲ್ಲಾ ವ್ಯಾಪ್ತಿಯಲ್ಲಿ ಕೊರೆದಿರುವ ಕೊಳವೆಬಾವಿಗಳು ಎಷ್ಟು?

ಆ) ಇದರಲ್ಲಿ ನೀರು ಯಥೇಚ್ಚವಾಗಿ ದೊರೆಯುವ ಕೊಳವೆಬಾವಿಗಳ ಸಂಖ್ಯೆ ಎಷ್ಟು? ನೀರಿಲ್ಲದೆ ಮುಚ್ಚಿರುವ ಕೊಳವೆ ಬಾವಿಗಳು ಎಷ್ಟು?

ಇ) ಈಗ ಎಷ್ಟು ಆಡಿಗಳವರೆಗೆ ಕೊಳವೆಬಾವಿಗಳನ್ನು ಕೊರೆಯಲಾಗುವುದು?

ಈ) ಎಷ್ಟು ಕೊಳವೆಬಾವಿಗಳಲ್ಲಿ ಹ್ಯಾಂಡ್‌ಪಂಪ್ ಕೆಟ್ಟು ಹೋಗಿರುತ್ತದೆ? ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್(ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) 1995-96ನೇ ಸಾಲಿನಿಂದ ಜುಲೈ-97ರ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟು 22499 ಕೊಳವೆಬಾವಿಗಳನ್ನು ಕೊರೆಯಲಾಗಿದೆ.

ಆ) ಇವುಗಳಲ್ಲಿ ಹೆಚ್ಚು ಇಳುವರಿ ದೊರಕಿದ ಕೊಳವೆಬಾವಿಗಳ ಸಂಖ್ಯೆ : 8943, ನೀರಿಲ್ಲದೆ ಬಿಟ್ಟುಕೊಡಲಾದ ಕೊಳವೆ ಬಾವಿಗಳ ಸಂಖ್ಯೆ: 1694.